**ದಿನಾಂಕಃ 29/11/2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀ ಎನ್ ವಿ ಸಿ ವಕೀಲರಿಂದಃ**

1. ಅನುಕ್ರಮ ನಂ 3 ನೇ ಆಸ್ತಿ ನನ್ನ ಹೆಸರಿನಲ್ಲಿ ಇದ್ದ ಬಗ್ಗೆ ಪಹಣಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಪಹಣಿ ಪತ್ರಿಕೆ 2007 ನೇ ಇಸವಿಯದ್ದು ಇರುತ್ತದೆ. ಯಾವ ಇಸವಿಯಲ್ಲಿ ನನ್ನ ಸಹೋದರನ ಹೆಸರು ಅನುಕ್ರಮ ನಂ 3 ನೇ ಆಸ್ತಿಗೆ ದಾಖಲಾಗಿರುತ್ತದೆ ಎಂದು ಗೊತ್ತಿಲ್ಲ, ಆದರೆ 2011 ನೇ ಇಸವಿಯಲ್ಲಿ ನನ್ನ ಗಮನಕ್ಕೆ ಬಂದಿರುತ್ತದೆ. ಯಾವ ಆಧಾರದ ಮೇಲೆ ನನ್ನ ಸಹೋದರರು ಅನುಕ್ರಮ ನಂ 3 ನೇ ಹೆಸರಿಗೆ ತಮ್ಮ ಹೆಸರುಗಳನ್ನು ಹಚ್ಚಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ, ಆದರೆ ಅವರ ಖೊಟ್ಟಿ ರೀತಿಯಿಂದ ನನ್ನ ಅನುಮತಿ ಪಡೆಯದೇ ಹಚ್ಚಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2011-12 ರಿಂದ ಇಲ್ಲಿಯವರೆಗೂ ಅನುಕ್ರಮ ನಂ 3 ನೇ ಆಸ್ತಿ ನನ್ನ ಮತ್ತು ನನ್ನ ಸಹೋದರರ ಜಂಟಿ ಖಾತೆಯಲ್ಲಿದೆ ಎಂದರೆ ಸಾಕ್ಷಿ 2018 ರಲ್ಲಿ ಡಿಕ್ರಿಯ ಪ್ರಕಾರ ಹೆಸರು ಬದಲಾವಣೆ ಆಯಿತು ಆದರೆ ಅವರು ಅಪೀಲು ಮಾಡಿ, ಅಪೀಲಿನಲ್ಲಿ ಆದೇಶದ ಪ್ರಕಾರ ಮತ್ತೆ ದಾಖಲಾತಿಗಳನ್ನು ಬದಲಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

2. 2007 ರಲ್ಲಿ ಅನುಕ್ರಮ ನಂ 3 ನೇ ಆಸ್ತಿಯನ್ನು ನಾನು ಖರೀದಿ ಮಾಡಿದ ನಂತರ ಆದ ಡ ನಂಬರ್ ನನಗೆ ನೆನಪಿಲ್ಲ. ನಾನು ಎ ಸಿ ಕಚೇರಿಯಲ್ಲಿ ಪ್ರಶ್ನೆ ಮಾಡಿದ ಅಪೀಲಿನಲ್ಲಿ ವಾದಿಯು ಪಕ್ಷಗಾರಳಿರುವುದಿಲ್ಲ ಎಂದರೆ ಸರಿ. ನಮ್ಮ ಸೋದರ ಅತ್ತೆಯರು ದಾಖಲು ಮಾಡಿದ ಓ ಎಸ್ ನಂ 93/2015 ರಲ್ಲಿ ಈ ಪ್ರಕರಣದ ವಾದಿ ಪಕ್ಷಗಾರಳಿರಲಿಲ್ಲ ಎಂದರೆ ಸರಿ. ಆರ್ ಟಿ ಎಸ್ ಎ ಪಿ 41/2016-17 ಹಾಗೂ ಓ ಎಸ್ ನಂ. 93/2015 ರಲ್ಲಿ ವಾದಿಯು ಪಕ್ಷಗಾರಳಿರುವುದಿಲ್ಲ,

ಹೀಗಾಗಿ ಅವುಗಳಲ್ಲಿ ಆದೇಶಗಳು ವಾದಿಗೆ ಬಂಧನಕಾರಿಯಾಗವುದಿಲ್ಲ ಎಂದರೆ ಸರಿಯಲ್ಲ. ನಿಡಿ 28 ರಿಂದ 30 ದಾಖಲಾತಿಗಳಲ್ಲಿ ಸಹಿ ಮಾಡಿರುವ ಸಾಕ್ಷಿದಾರರು ಒಂದೇ ರೀತಿಯಾಗಿರುತ್ತಾರೆ ಎಂದರೆ ಸರಿ. ವಿ ಬಿ ಬೆಂಚಿಹಳ್ಳಿ ಎನ್ನುವ ಸಾಕ್ಷಿದಾರರು ನಿಡಿ 28 ಕ್ಕೆ ಮಾತ್ರ ಸಹಿ ಮಾಡಿದ್ದು, ನಿಡಿ 29 ಮತ್ತು 30 ಕ್ಕೆ ಸದರಿ ಸಾಕ್ಷಿದಾರರ ಸಹಿ ಇಲ್ಲ ಎಂದರೆ ಸರಿ. ನಿಡಿ 28 ರಿಂದ 30 ದಾಖಲಾತಿಗಳಲ್ಲಿ ಎ ಎಸ್ ಹಿರೇಮಠ ಎಂದು ಸಹಿ ಮಾಡಿದ ಸಾಕ್ಷಿದಾರರು ನನ್ನ ಅತ್ತೆಯ ಮಗ ಎಂದರೆ ಸರಿ. ಎಸ್ ಬಿ ಲೋಕನಗೌಡರವರು ನನ್ನ ಪತ್ನಿಯ ಅಣ್ಣ ಎಂದರೆ ಸರಿ. ನಿಡಿ 29 ಮತ್ತು 30 ಒಂದೇ ದಿನ ಆಗಿವೆ ಎಂದರೆ ಸರಿ. ನಿಡಿ 29 ಮತ್ತು 30 ದಾಖಲಾತಿಗಳು ಒಂದೇ ದಿನ 17 ನಿಮಿಷಗಳ ಒಳಗಾಗಿಯೇ ಆಗಿವೆ ಎಂದರೆ ಸಾಕ್ಷಿ ಸಮಯ ನೆನಪಿಲ್ಲ ಆದರೆ ಒಂದೇ ದಿನ ಆಗಿವೆ ಎಂದು ನುಡಿಯುತ್ತಾರೆ.

3. ನನ್ನ ತಂದೆ ಇಂಗ್ಲೀಷ್ ಮತ್ತು ಕನ್ನಡ ಎರಡೂ ರೀತಿಯಿಂದ ಸಹಿ ಮಾಡುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಂದೆ ಇಂಗ್ಲೀಷ್ ನಲ್ಲಿ ಸಹಿ ಮಾಡಿದರೆ ಎಂ ಎಸ್ ಹಿರೇಮಠ್ ಎಂದು ಬರೆಯುತ್ತಿದ್ದರು, ಕನ್ನಡದಲ್ಲಿ ಸಹಿ ಮಾಡಿದರೆ ಮಲ್ಲಿಕಾರ್ಜುನಯ್ಯ ಸ ಹಿರೇಮಠ ಅಥವ ಮಠದ್ ಎಂದು ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಡಿ 28 ಕ್ಕೆ ನನ್ನ ತಂದೆ ಮಲ್ಲಿಕಾರ್ಜುನಯ್ಯ ಸದಾಶಿವಯ್ಯ ಹಿರೇಮಠ ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಡಿ 29 ಕ್ಕೆ ನನ್ನ ತಂದೆ ಇಂಗ್ಲೀಷ್ ನಲ್ಲಿ ಸಹಿ ಮಾಡಿರುತ್ತಾರೆ. ನನ್ನ ತಂದೆ ಯಾವತ್ತೂ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿರಲಿಲ್ಲ, ನಿಡಿ 29 ಕ್ಕೆ ನಾನೇ ಎಂ ಎಸ್ ಹಿರೇಮಠ ಎಂದು ಅವರ ಸಹಿಯನ್ನು ಖೊಟ್ಟಿ ರೀತಿಯಿಂದ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಕನ್ನಡ ಹಾಗೂ ಇಂಗ್ಲೀಷ್

ಎರಡೂ ರೀತಿಯಿಂದ ಸಹಿ ಮಾಡುತ್ತಾರೆ ಎಂದು ತೋರಿಸುವ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಆ ಪ್ರಸಂಗ ಬಂದಿಲ್ಲ ಹಾಗಾಗಿ ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಕೇವಲ ಕನ್ನಡದಲ್ಲಿ ಮಾತ್ರ ಸಹಿ ಮಾಡುತ್ತಿದ್ದು, ಇಂಗ್ಲೀಷ್‌ನಲ್ಲಿ ಸಹಿ ಮಾಡದೇ ಇರುವುದರಿಂದ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ 29 ಮತ್ತು 30 ಒಂದೇ ದಿನ ಆಗಿದ್ದು, ನನ್ನ ತಂದೆಯ ಪೋಟೋವನ್ನು ಎರಡೂ ದಾಖಲಾತಿಗಳಲ್ಲಿ ಹಾಕಿಸಿದ್ದೇನೆ ಎಂದರೆ ಸರಿಯಲ್ಲ.

4. ನಾನು ಪ್ರಕಾಶ್ ನಾಯಕ್ ರವರ ಕಡೆಯಿಂದ ಏಪ್ರಿಲ್ 2007 ರಂದು ರೂ 50 ಸಾವಿರ ಸಾಲ ಪಡೆದುಕೊಂಡಿರುತ್ತೇನೆ. ಈ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ರಾಜು ಬೊಮ್ಮನಹಳ್ಳಿ ನನ್ನ ಸಂಬಂಧಿಕರಲ್ಲಿ, ಅವರು ನನ್ನ ಸಹೋದ್ಯೋಗಿ ಇದ್ದು, ಅವರ ಕಡೆಯಿಂದ ನಾನು ಮಾರ್ಚ್ 2007 ರಲ್ಲಿ ರೂ 50 ಸಾವಿರ ಸಾಲ ಪಡೆದಿದ್ದೆ, ಈ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ವೀರೇಶ್ ನನ್ನ ಚಿಕ್ಕಮ್ಮನ ಮಗ ಅವರಿಂದ ನಾನು ಮಾರ್ಚ್ 2007 ರಲ್ಲಿ ರೂ 50 ಸಾವಿರ ಸಾಲ ಪಡೆದಿದ್ದೆ ಈ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಪ್ರಕಾಶ್ ನಾಯಕ, ರಾಜು ಬೊಮ್ಮನಹಳ್ಳಿ ಹಾಗೂ ವಿರೇಶ್ ಮಠದ್ ರವರಿಂದ ನಾನು ಯಾವುದೇ ಸಾಲವನ್ನು ಪಡೆದಿಲ್ಲ ಹೀಗಾಗಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅನುಕ್ರಮ ನಂ. 3 ನೇ ಆಸ್ತಿಯನ್ನು ಖರೀದಿ ಮಾಡುವಾಗ ನನ್ನ ಸಹೋದರರು ಜಮೀನಿನಿಂದ ಬಂದ ಉತ್ಪನ್ನದಲ್ಲಿಯ ಮಾಲನ್ನು ಮಾರಾಟ ಮಾಡಿ ಅದರ ಹಣವನ್ನು ಕೊಟ್ಟಿದ್ದು, ನಾನು

ಯಾವುದೇ ಸಾಲ ಮಾಡಿ ಸದರಿ ಆಸ್ತಿಯನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಯನ್ನು ಅಡವಿಟ್ಟು ಪಿ ಎಲ್ ಡಿ ಬ್ಯಾಂಕಿನಲ್ಲಿ ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ. ಅನುಕ್ರಮ ನಂ3 ನೇ ಆಸ್ತಿಯನ್ನು ಪಿ ಎಲ್ ಡಿ ಬ್ಯಾಂಕಿನಲ್ಲಿ ಸಾಲ ಪಡೆದಿದ್ದೆ. ಪಿ ಎಲ್ ಡಿ ಬ್ಯಾಂಕಿನಲ್ಲಿ ಸಾಲವು ನನ್ನ ಹಾಗೂ ನನ್ನ ಸಹೋದರರ ಹೆಸರಿನಲ್ಲಿ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿ ಆಗಲೇ ನನಗೆ ಅನುಕ್ರಮ ನಂ 3 ನೇಆಸ್ತಿಗೆ ನನ್ನ ಸಹೋದರರ ಹೆಸರು ದಾಖಲಾಗಿದೆ ಎಂದು ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಲ ಪಡೆಯುವಾಗ ಸಾಲದ ಪತ್ರಗಳಿಗೆ ನಾನು ಹಾಗೂ ನನ್ನ ಸಹೋದರರಿಬ್ಬರೂ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಹೆಸರಿಗೆ ಒಟ್ಟು ರೂ 3, 21,000/- ಸಾಲ ಮಂಜೂರಾಗಿತ್ತು ಎಂದರೆ ಸರಿ. ಇದರಲ್ಲಿ 90,000/- ಸರಕಾರದಿಂದ ಸಬ್ಸಿಡಿಯಾಗಿ ಬಂದಿತ್ತು ಎಂದರೆ ಸರಿ. ರೂ 90,000/- ಸಬ್ಸಿಡಿ ಹೋಗಿ ಉಳಿದ ರೂ 2,31,000/- ಸಾಲವನ್ನು ನನ್ನ ಸಹೋದರರಿಬ್ಬರೂ ತೀರಿಸಿರುತ್ತಾರೆ ಎಂದರೆ ಸಾಕ್ಷಿ ನಾನೊಬ್ಬನೇ ಸಾಲ ಮರುಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿದ ದಾಖಲಾತಿಗಳ ಪ್ರಕಾರ ರೂ 84,190/- ಮಾತ್ರ ಸಾಲಮರುಪಾವತಿ ಮಾಡಿದ್ದು ಇರುತ್ತದೆ ಎಂದರೆ ಸಾಕ್ಷಿ ಕೆಲವೊಂದು ರಸೀದಿಗಳು ಸಿಗದೇ ಇದ್ದುದ್ದರಿಂದ ಹಾಜರು ಪಡಿಸಿಲ್ಲ ಆದರೆ ಎಲ್ಲಾ ಸಾಲಗಳನ್ನು ನಾನೇ ಮರುಪಾವತಿ ಮಾಡಿರುತ್ತೇನೆ ಮತ್ತು ಬ್ಯಾಂಕಿನವರು ನನಗೆ ಕ್ಲಿಯರೆನ್ಸ ಸರ್ಟಿಫಿಕೇಟ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ರೂ 84,190/- ಗಳನ್ನು ನಾನು ಬ್ಯಾಂಕಿಗೆ ಮರುಪಾವತಿ ಮಾಡಿದ್ದು, ಉಳಿದ ಹಣವನ್ನು ನನ್ನ ಸಹೋದರರೇ ಬ್ಯಾಂಕಿಗೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ರೂ 84,190/- ಗಳನ್ನು ಸಹ ನನ್ನ ಸಹೋದರರು ನನ್ನ ಕೈಗೆ ಕೊಟ್ಟಿದ್ದು, ಅದನ್ನು

ನನ್ನ ಹೆಸರಿಗೆ ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅನುಕ್ರಮ ನಂ 3 ನೇ ಆಸ್ತಿ ಒಟ್ಟು ಕುಟುಂಬದ ಆಸ್ತಿಯಾಗಿದ್ದು, ನನ್ನ ಸ್ವಯಾರ್ಜಿ ಆಸ್ತಿಯಲ್ಲ ಎಂದರೆ ಸರಿಯಲ್ಲ.

5. ಶಾಂತಯ್ಯ ತಂದೆ ಚನ್ನವೀರಯ್ಯ ಕೆಂಡದಮಠ ಎಂದರೆ ನನ್ನ ಸೋದರ ಮಾವ. ಸದರಿ ಶಾಂತಯ್ಯ ರವರಿಗೆ ರಾಣೇಬೆನ್ನೂರಿನಲ್ಲಿ ಒಂದು ನಿವೇಶನ ಇತ್ತು ಎಂದರೆ ಸಾಕ್ಷಿ 3 ಎಕರೆಗೆ ಸಂಬಂಧಿಸಿದಂತೆ ಒಂದು ಲೇಔಟ್ ಇತ್ತು ಎಂದು ನುಡಿಯುತ್ತಾರೆ. ನನಗೆ ನಾಗರಾಜ ತಂದೆ ಬಸನಗೌಡ ಹಿತ್ತಲಮನಿಯವರ ಪರಿಚಯ ಇದೆ. ಸದರಿ ನಾಗರಾಜರವರು ಅಸುಂಡಿ ಗ್ರಾಮದವರು ಎಂದರೆ ಸಾಕ್ಷಿ ಅವರು ಮೂಲತಃ ಶಿಡೇನೂರು ಗ್ರಾಮದವರು ಆಗಿದ್ದು, ಆದರೆ ಕಳೆದ 50 ವರ್ಷಗಳಿಂದ ಧಾರವಾಡದಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಅನುಕ್ರಮ ನಂ. 6 ನೇ ಆಸ್ತಿಯನ್ನು ನಾನು ಖರೀದಿ ಹಿಡಿಯುವುದಕ್ಕಿಂತ ಮೊದಲು ನಾಗರಾಜ್ ಹಿತ್ತಲಮನಿಯವರಿಗೆ ಸಂಬಂಧಿಸಿದ ಒಂದು ನಿವೇಶನವನ್ನು ನನ್ನ ತಂದೆ ನನ್ನ ಹೆಸರಿಗೆ ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ನನ್ನ ತಂದೆ ನನ್ನ ಹಸೆರಿಗೆ ಖರೀದಿ ಮಾಡಿಲ್ಲ ನಾನೇ ಹಿತ್ತಲಮನಿಯವರಿಂದ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಉತ್ಪನ್ನದಿಂದ ನನ್ನ ತಂದೆ ರಾಣೇಬೆನ್ನೂರಿನಲ್ಲಿ ಒಂದು ಆಸ್ತಿ ಇರಲಿ ಎಂದು ನನ್ನ ಹೆಸರಿಗೆ ರಾಣೇಬೆನ್ನೂರು ಸರ್ವೆ ನಂ . 8 ಡ, ಪ್ಲಾಟ್ ನಂ. 17 ಕ್ಷೇತ್ರ 1 ಗುಂಟೆ 4 ಆಣೆ ಆಸ್ತಿಯನ್ನು ಖೇರಿದಿ ಮಾಡಿದ್ದರು ಎಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ದಾಖಲಾತಿ ಸದರಿ ಆಸ್ತಿಯ ಪಹಣಿ ಪತ್ರಿಕೆ ಎಂದರೆ ಸರಿ. ಸಾಕ್ಷಿ ದಾಖಲಾತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 20 ಎಂದು ಗುರುತಿಸಲಾಯಿತು. ನನ್ನ ತಂದೆ ರಾಣೇಬೆನ್ನೂರಿನಲ್ಲಿ ಇರಬೇಕು

ಎನ್ನುವ ಉದ್ದೇಶದಿಂದಲೇ ನಿಪಿ 20 ಪ್ಲಾಟನ್ನು ನನ್ನ ಹೆಸರಿಗೆ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. 2011-12 ರಲ್ಲಿ ನಾನು ನಿಪಿ 20 ರ ಆಸ್ತಿಯನ್ನು ಸಿದ್ದಪ್ಪ ಶಿವರುದ್ರಪ್ಪ ಬೆಲ್ಲದ್ ಹಾಗೂ ಯಶೋದಮ್ಮ ಕೋಂ ಸಿದ್ದಪ್ಪ ಬೆಲ್ಲದ್ ರವರಿಗೆ ಮಾರಾಟ ಮಾಡಿದ್ದೆ ಎಂದರ ಸಾಕ್ಷಿ ನಾನು ಮಾಡಿದ್ದು ನಿಜ ಆದರೆ ಅವರಿಗೆ ಮಾರಾಟ ಮಾಡಿಲ್ಲ, ಒಬ್ಬ ಮಹದೇವಗೌಡ ಬಾಳನಗೌಡರವರಿಗೆ ಮಾರಾಟ ಮಾಡಿದ್ದೆ ಎಂದು ನುಡಿಯುತ್ತಾರೆ. ನಿಪಿ 20 ರ ಆಸ್ತಿಯನ್ನು ನಾನು 9 ಲಕ್ಷಕ್ಕೆ ಮಾರಾಟ ಮಾಡಿದ್ದೆ. ನಾನು ನಿಪಿ 20ರ ಆಸ್ತಿಯನ್ನು ನಾನು 9 ಲಕ್ಷಕ್ಕೆ ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ನಿಪಿ 6 ಆಸ್ತಿಯನ್ನು ರೂ 8 ಲಕ್ಷಕ್ಕೆ ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನಿಪಿ 6 ಆಸ್ತಿಯನ್ನು ನಾನು ಬ್ಯಾಂಕಿನಲ್ಲಿ ಲೋನ್ ಮಾಡಿ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಬ್ಯಾಂಕಿನಲ್ಲಿ ಲೋನ್ ಮಾಡಿ ಖರೀದಿ ಮಾಡಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು 9 ಲಕ್ಷ ರೂಗಳಿಗೆ ನಿಪಿ 20 ಆಸ್ತಿಯನ್ನು ಮಾರಾಟ ಮಾಡಿದ್ದು, ಸದರಿ ಹಣ ನನ್ನ ಬಳಿ ಇತ್ತು , ಹೀಗಾಗಿ ಸಾಲ ಮಾಡಿ ಅನುಕ್ರಮ ನಂ 6 ನೇಆಸ್ತಿಯನ್ನು ಖರೀದಿ ಮಾಡುವ ಪ್ರಸಂಗವೇ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಸಹೋದರ- ಸಹೋದರಿಯರು ನನಗೆ ಹಣದ ನೆರವನ್ನು ಮಾಡಿದ್ದು, ಆ ಕಾರಣದಿಂದ ಎಸ್ ಬಿ ಐ ನಲ್ಲಿ ರೂ 20,53,000/- ಸಾಲ ಮಾಡುವ ಪ್ರಸಂಗವೇ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆ ಕೊಡಬಾರದು ಎನ್ನುವ ಉದ್ದೇಶದಿಂದ ಸಾಲ ಮಾಡಿದ್ದೇನೆ ಎಂದು ಸುಳ್ಳು ಹೇಳಿ ಖೊಟ್ಟಿ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

6. ಈ ದಾವೆ ದಾಖಲು ಮಾಡುವುದಕ್ಕಿಂತ ಒಂದು ತಿಂಗಳು ಮೊದಲು ನಾನು ಅನುಕ್ರಮ ನಂ. 6 ನೇ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ಹಣದ ಅಡಚಣ ಆಗಿದ್ದರಿಂದ ಮಾರಿರುತ್ತೇನೆ ಎಂದು ನುಡಿಯುತ್ತಾರೆ. ನಾನು ವೈಯಕ್ತಿಕ ಸಾಲವನ್ನು ತೀರಿಸುವ ಸಲುವಾಗಿ ಮಾರಾಟ ಮಾಡಿರುತ್ತೇನೆ. ಗೋವಾದಲ್ಲಿ ಪ್ರಾಜೆಕ್ಟ ಮಾಡುವಾಗ ಸ್ನೇಹಿತರ ಬಳಿ ಸುಮಾರು 32 ಲಕ್ಷದ ವರೆಗೆ ಸಾಲ ಪಡೆದುಕೊಂಡಿದ್ದೆ, ಅದನ್ನು ತೀರಿಸುವ ಸಲುವಾಗಿ ನಾನು ಅನುಕ್ರಮ ನಂ 6 ನೇ ಆಸ್ತಿಯನ್ನು ಮಾರಾಟ ಮಾಡಿದ್ದೇನೆ. ರೂ 32 ಲಕ್ಷ ಹಣವನ್ನು ಯಾವ ತಾರೀಖು ಎಷ್ಟೆಷ್ಟು ಸಾಲ ಪಡೆದಿದ್ದೆ ಎಂದು ನೆನಪಿಲ್ಲ. ಸ್ನೇಹಿತರಿಂದ ಸಾಲವನ್ನು ತೀರಿಸಿದ ಬಗ್ಗೆ ನನ್ನ ಬಳಿ ದಾಖಲಾತಿಗಳು ಇಲ್ಲ. ನಾನು ಒಬ್ಬನೇ ಸ್ನೇಹಿತರಿಂದ ಸಾಲ ಪಡೆದಿಲ್ಲ ಸುಮಾರು ಸ್ನೇಹಿತರಿಂದ ಸಾಲ ಪಡೆದಿದ್ದೆ. ಒಂದು ವೇಳೆ ನಾನು ಸಾಲ ಪಡೆದಿದ್ದರೆ ನನ್ನ ಬಳಿ ದಾಖಲಾತಿಗಳು ಇರುತ್ತಿದ್ದವು, ನಾನು ಯಾವುದೇ ಸಾಲ ಪಡೆಯದೇ ಇರುವುದರಿಂದ ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆ ಕೊಡಬಾರದು ಎನ್ನುವ ಉದ್ದೇಶದಿಂದಲೇ ನಾನು ಅನುಕ್ರಮನಂ 6 ನೇಆಸ್ತಿ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ.

**(ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.